KAHV010023102019

**SPL.C(SVC)/6/2019**

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ. 6/2019

**ಫಿರ್ಯಾದಿದಾರರು** – ರಾಜ್ಯದ ಪರವಾಗಿ

ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರು,
ಹಾವೇರಿ.

**– ವಿರುದ್ಧ –**

**ಆರೋಪಿ** – ಮಾಲತೇಶ ತಂದೆ ನಿಂಗಪ್ಪ ಗುಮಕಾರ.

## *:: ದೋಷಾರೋಪಣೆ ::*

ಹಾವೇರಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರಾದ ಶ್ರೀಮತಿ ಯಾದವ ವನಮಾಲಾ ಆನಂದರಾವ್, ಬಿ.ಕಾಂ., ಎಲ್ಎಲ್.ಬಿ(ಸ್ಪೆಷಲ್); ನಾನು ಈ ಕೆಳಕಂಡ ಆರೋಪಿಯಾದ -

ಮಾಲತೇಶ ತಂದೆ ನಿಂಗಪ್ಪ ಗುಮಕಾರ,
ವಯಾಃ 54 ವರ್ಷ, ಉಃ ಗ್ರಾಮ-ಲೆಕ್ಕಾಧಿಕಾರಿಗಳು,
ಭೂವೀರಾಪುರ ಗ್ರಾಮ, ಕಳ್ಳಿಹಾಳ/ನೆಲೋಗಲ್ ಪ್ರಭಾರ,
ಸಾಃ ಹಾವೇರಿ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ಈ ಪ್ರಕರಣದ ಪಿರ್ಯಾದಿ/ಚಾಸಾ-1 ಶಿವಲಿಂಗೇಶ ಮಾದರ ಇವರ ತಂದೆಯಾದ ದುರಗಪ್ಪ ಮಾದರ ದಿನಾಂಕ:27/12/2017 ರಂದು ಕ್ಯಾನ್ಸರ್ ಖಾಯಿಲೆಯಿಂದ ಮೃತಹೊಂದಿದ್ದು, ಅವರಿಗೆ 4 ಜನ ಮಕ್ಕಳಿದ್ದು, ಮೃತರ ಹೆಸರಿನಲ್ಲಿ ಭೂವೀರಾಪುರದಲ್ಲಿ ಸರ್ವೆ ನಂ.38 ರಲ್ಲಿ 1 ಎಕರೆ 20 ಗುಂಟೆ ನೀರಾವರಿ ಜಮೀನಿದ್ದು, ಪಿರ್ಯಾದಿ/ಚಾಸಾ-1 ಶಿವಲಿಂಗೇಶ ತನ್ನ ತಂದೆಯ ಹೆಸರಿನಲ್ಲಿರುವ 1 ಎಕರೆ 20 ಗುಂಟೆ ನೀರಾವರಿ ಜಮೀನನ್ನು ತನ್ನ ತಾಯಿ ಪಾರ್ವತೆವ್ವ ಇವರ ಹೆಸರಿಗೆ ಮಾಡಲು ತನ್ನ ತಾಯಿಯ ಜೊತೆಗೆ ದಿನಾಂಕ:26/2/2018 ರಂದು ಭೂವೀರಾಪುರ ಗ್ರಾಮದ ಗ್ರಾಮ-ಲೆಕ್ಕಾಧಿಕಾರಿ ಅಂದರೆ ಆರೋಪಿಯಾದ ನಿಮ್ಮನ್ನು ಭೇಟಿ ಮಾಡಿ, ಪಿರ್ಯಾದಿಯ ತಂದೆಯ ಹೆಸರಿನಲ್ಲಿರುವ ಜಮೀನನ್ನು ತನ್ನ ತಾಯಿಯ ಹೆಸರಿಗೆ ಮಾಡಿಕೊಡಲು ಅರ್ಜಿಯನ್ನು ನೀಡಿದಾಗ, ಆರೋಪಿಯಾದ ನೀವು ಪಿರ್ಯಾದಿಯ ತಾಯಿಯ ಹೆಸರಿಗೆ ಜಮೀನು ಮಾಡಿಕೊಡಲು ಮೊದಲು 5,000/- ರೂಪಾಯಿ ಕೇಳಿ, ನಂತರ 3,000/- ರೂಪಾಯಿ ಅಕ್ರಮ ಹಣ(ಲಂಚ) ಕೊಡುವಂತೆ ಕೇಳಿದ್ದು, ಆ ಮೂಲಕ ಆರೋಪಿಯಾದ ನೀವು ಪಿ.ಸಿ.ಕಾಯ್ದೆ-1988 ರ ಕಲಂ.7 ರಡಿಯ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ ಮತ್ತು ಅದು ಈ ನ್ಯಾಯಾಲಯದ ಸಂಜ್ಞೆಯಲ್ಲಿದೆ.

ಎರಡನೆಯದಾಗಿ, ದಿನಾಂಕ:27/02/2018 ರಂದು, ಪಿರ್ಯಾದಿ ಹಾಗೂ ಆತನ ತಾಯಿ, ಆರೋಪಿಯಾದ ನಿಮಗೆ ಪೋನ್ ಮಾಡಿ ತಾವು ನಿಮ್ಮ ಕಛೇರಿಗೆ ಬಂದಿರುವುದಾಗಿ ತಿಳಿಸಿದ್ದು, ಆರೋಪಿಯಾದ ನೀವು ಊಟ ಮಾಡಿ ಬರುವುದಾಗಿ ಹೇಳಿ, ಸ್ವಲ್ಪ ಹೊತ್ತಿನ ನಂತರ ನಿಮ್ಮ ಕಛೇರಿಗೆ ಬಂದಿದ್ದು, ನಂತರ ಪಿರ್ಯಾದಿ ಹಾಗೂ ಆತನ ತಾಯಿ ತಮ್ಮ ಕೆಲಸದ ಬಗ್ಗೆ ನಿಮ್ಮ ಬಳಿ ವಿಚಾರಿಸಿದಾಗ, ನೀವು ಅವರಿಗೆ ಹಣದ ಬಗ್ಗೆ ವಿಚಾರಿಸಿ, ಆರೋಪಿಯಾದ ನೀವು ಪಿರ್ಯಾದಿಯಿಂದ 3,000/- ರೂಪಾಯಿ ಲಂಚದ ಹಣವನ್ನು ಕೇಳಿ ಪಡೆದುಕೊಂಡಾಗ, ಲೋಕಾಯುಕ್ತರ ಬಲೆಗೆ ಸಿಕ್ಕಿ ಬಿದ್ದು, ಆ ಮೂಲಕ ಆರೋಪಿಯಾದ ನೀವು ಪಿ.ಸಿ.ಕಾಯ್ದೆ-1988 ರ ಕಲಂ.13(1)(ಡಿ) ಸಹ ಕಲಂ.13(2) ರಡಿಯ ಶಿಕ್ಷಾರ್ಹ ಅಪರಾಧಗಳನ್ನು ಎಸಗಿದ್ದೀರಿ ಮತ್ತು ಅವು ಈ ನ್ಯಾಯಾಲಯದ ಸಂಜ್ಞೆಯಲ್ಲಿವೆ.

ಈ ಮೇಲೆ ಹೇಳಿದ ದೋಷಾರೋಪಣೆಗಳಿಗಾಗಿ ಈ ನ್ಯಾಯಾಲಯದ ಮುಂದೆ ಅಧಿವಿಚಾರಣೆ ನಡೆಯಲಿದೆ.

**ಹಾವೇರಿ** **(ಯಾದವ ವನಮಾಲಾ ಎ.)**

**ದಿನಾಂಕ: 07-10-2021** **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**

**ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ**